# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | (530)59 |
| ಸದಸ್ಯರ ಹೆಸರು | ಶ್ರೀ ಶಿವಣ್ಣ ಬಿ.ಎಸ್ (ವಿಧಾನಸಭೆದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ಸಚಿವರು | ಮಾನ್ಯ ಗೃಹ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ಇ-ಆಡಳಿತ ಸಚಿವರು |
| ಉತ್ತರಿಸಬೇಕಾದ ದಿನಾಂಕ | 20.08.2026 |

| ಪ್ರಶ್ನೆ | ಉತ್ತರ |
|---|---|
| (ಅ) 2021 ರಿಂದ ಇದುವರೆಗೆ ಕರ್ನಾಟಕ ರಾಜ್ಯದಲ್ಲಿ ನೋಂದಾಯಿಸಲ್ಪಟ್ಟಿರುವ ಒಟ್ಟು ಸ್ಟಾರ್ಟ್‌ಅಪ್‌ಗಳ (Startups) ಸಂಖ್ಯೆ ಎಷ್ಟು; (ವರ್ಷಾವಾರು ಹಾಗೂ ಜಿಲ್ಲಾವಾರು ಸಂಪೂರ್ಣ ವಿವರ ನೀಡುವುದು) | 2021 ರಿಂದ ಇದುವರೆಗೆ ಕರ್ನಾಟಕ ರಾಜ್ಯದಲ್ಲಿ ನೋಂದಾಯಿಸಲ್ಪಟ್ಟಿರುವ ಒಟ್ಟು ಸ್ಟಾರ್ಟ್‌ಅಪ್‌ಗಳ (Startups) ಸಂಖ್ಯೆ:2584 ಇರುತ್ತದೆ. ವರ್ಷಾವಾರು ಹಾಗೂ ಜಿಲ್ಲಾವಾರು ಸಂಖ್ಯೆಯ ವಿವರಗಳನ್ನು **ಅನುಬಂಧ**ದಲ್ಲಿರಿಸಿದೆ. |
| (ಆ) ರಾಜ್ಯ ಸರ್ಕಾರದ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ (IT-BT) ಇಲಾಖೆ ಹಾಗೂ K-Tech ಮೂಲಕ ಈ ಸ್ಟಾರ್ಟ್‌ಅಪ್‌ಗಳಿಗೆ ಆರಂಭಿಕ ಬಂಡವಾಳ (Seed Fund) ಮಾರ್ಗದರ್ಶನ (Mentoring) ಮತ್ತು ಇನ್‌ಕ್ಯುಬೇಶನ್ ಕೇಂದ್ರಗಳ (Incubation Centres) ಮೂಲಕ ನೀಡಲಾಗಿರುವ ಸಹಾಯಧನ ಮತ್ತು ಪ್ರೋತ್ಸಾಹಕ ಸೌಲಭ್ಯಗಳೇನು; | ರಾಜ್ಯ ಸರ್ಕಾರದ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ (IT-BT) ಇಲಾಖೆ ಹಾಗೂ K-Tech ಮೂಲಕ ಈ ಸ್ಟಾರ್ಟ್ ಅಪ್‌ಗಳಿಗೆ ಆರಂಭಿಕ ಬಂಡವಾಳ (Seed Fund) ಮಾರ್ಗದರ್ಶನ (Mentoring) ಮತ್ತು ಇನ್‌ಕ್ಯುಬೇಶನ್ ಕೇಂದ್ರಗಳ (Incubation Centres) ಮೂಲಕ ನೀಡಲಾಗಿರುವ ಸಹಾಯಧನ ಮತ್ತು ಪ್ರೋತ್ಸಾಹಕ ಸೌಲಭ್ಯಗಳು ಈ ಕೆಳಕಂಡಂತೆ ಇರುತ್ತದೆ:-<br><br>**ಆರಂಭಿಕ ಹಂತದ ಸಹಾಯಧನ:**<br><br>• **ಎಲಿವೇಟ್ (Idea2PoC):** ಈ ಕಾರ್ಯಕ್ರಮದಡಿ ಆಯ್ಕೆಯಾದ ಅರ್ಹ ಸ್ಟಾರ್ಟ್‌ಅಪ್‌ಗಳಿಗೆ ಉತ್ಪನ್ನದ ಪರಿಕಲ್ಪನೆಯನ್ನು ಅಭಿವೃದ್ಧಿಪಡಿಸಲು ಹಾಗೂ ಮಾರುಕಟ್ಟೆಗೆ ಸಿದ್ಧಪಡಿಸಲು ರೂ.50 ಲಕ್ಷದವರೆಗೆ ಆರಂಭಿಕ ಅನುದಾನ (Seed Funding) ನೀಡಲಾಗುತ್ತದೆ. ಇದರ ಜೊತೆಗೆ, ಸ್ಟಾರ್ಟ್‌ಅಪ್‌ಗಳಿಗೆ ತಜ್ಞರ ಮಾರ್ಗದರ್ಶನ, ಉತ್ಪನ್ನ ಅಭಿವೃದ್ಧಿ, ಮಾರುಕಟ್ಟೆ ಸಂಪರ್ಕ, ಹೂಡಿಕೆದಾರರ ಸಂಪರ್ಕ ಹಾಗೂ ವ್ಯವಹಾರ ವಿಸ್ತರಣೆಗೆ ಅಗತ್ಯವಾದ ಬೆಂಬಲವನ್ನು ಒದಗಿಸಲಾಗುತ್ತದೆ. ಈ ಯೋಜನೆಯಡಿ 2021ರಿಂದ ಇಲ್ಲಿಯವರೆಗೆ ಒಟ್ಟು 762 ನವೋದ್ಯಮಿಗಳನ್ನು ಆಯ್ಕೆ ಮಾಡಲಾಗಿದ್ದು, ಒಟ್ಟು ರೂ.175.94 ಕೋಟಿ ಅನುದಾನವನ್ನು ಹಂಚಿಕೆ ಮಾಡಲಾಗಿದೆ.<br>• **ಗ್ರಾಸ್ ರೂಟ್:** ರೈತರು, ಕುಶಲಕರ್ಮಿಗಳು, ಕಾರ್ಮಿಕರು ಮತ್ತು ತಂತ್ರಜ್ಞರಂತಹ ನಾವೀನ್ಯಕಾರರಿಗೆ ಅವರ ತಂತ್ರಜ್ಞಾನಗಳನ್ನು |

ಪರಿಷ್ಕರಿಸುವಲ್ಲಿ ಮತ್ತು ಅವರ ಪರಿಹಾರಗಳನ್ನು ವಾಣಿಜ್ಯೀಕರಿಸಲು ಗರಿಷ್ಠ ರೂ.4 ಲಕ್ಷದವರೆಗೆ ಆರ್ಥಿಕ ಸಹಾಯವನ್ನು ಒದಗಿಸಿ, ನವೋದ್ಯಮವಾಗಿ ರೂಪುಗೊಳ್ಳಲು ಬೆಂಬಲ ಒದಗಿಸಲಾಗುತ್ತಿದೆ. ಈ ಯೋಜನೆಯಡಿ ಇಲ್ಲಿಯವರೆಗೆ ಒಟ್ಟು 44 ಅರ್ಹ ನವೋದ್ಯಮಿಗಳನ್ನು ಆಯ್ಕೆ ಮಾಡಲಾಗಿದ್ದು, ರೂ.1.76 ಕೋಟಿ ಅನುದಾನವನ್ನು ಹಂಚಿಕೆ ಮಾಡಲಾಗಿದೆ.

- **ಎಲಿವೇಟ್ ನೆಕ್ಸ್ಟ್ (ELEVATE NxT - Deeptech):** ರಾಜ್ಯದ ಡೀಪ್-ಟೆಕ್ ಪರಿಸರ ವ್ಯವಸ್ಥೆಯನ್ನು ಬಲಪಡಿಸುವ ಗುರಿ ಹೊಂದಿರುವ LEAP ಯೋಜನೆಯ 'ELEVATE NxT' ಕಾರ್ಯಕ್ರಮದಡಿ ಉದಯೋನ್ಮುಖ ತಂತ್ರಜ್ಞಾನದ ಡೀಪ್-ಟೆಕ್ ನವೋದ್ಯಮಗಳಿಗೆ ಗರಿಷ್ಠ ರೂ.1 ಕೋಟಿವರೆಗೆ ಆರ್ಥಿಕ ಸಹಾಯವನ್ನು ಒದಗಿಸಿ ಪ್ರೋತ್ಸಾಹ ನೀಡಲಾಗುತ್ತಿದೆ. ಈ ಯೋಜನೆಯನ್ನು 2026ರಲ್ಲಿ ಅನುಷ್ಠಾನಗೊಳಿಸಿದ್ದು, 33 ಅರ್ಹ ನವೋದ್ಯಮಿಗಳನ್ನು ಆಯ್ಕೆ ಮಾಡಲಾಗಿದ್ದು, ಒಟ್ಟು ರೂ.30 ಕೋಟಿ ಅನುದಾನವನ್ನು ಮಂಜೂರು ಮಾಡಲಾಗಿದೆ.
- **ಉತ್ಕೃಷ್ಟತಾ ಕೇಂದ್ರಗಳು (CoEs)**: ನವೋದ್ಯಮಗಳಿಗೆ ಇನ್‌ಕ್ಯುಬೇಶನ್, ಮಾರ್ಗದರ್ಶನ, ಸುಧಾರಿತ ಸಂಶೋಧನೆ ಮತ್ತು ಅಭಿವೃದ್ಧಿ (R&D) ಮೂಲಸೌಕರ್ಯ, ಮೂಲಮಾದರಿ ರಚನೆ (prototyping) ಮತ್ತು ತಂತ್ರಜ್ಞಾನ ಮೌಲ್ಯೀಕರಣದ ಮೂಲಕ ಸಮಗ್ರ ಬೆಂಬಲವನ್ನು ಒದಗಿಸಲಿವೆ. ನವೀನ ಆಲೋಚನೆಗಳನ್ನು ಮಾರುಕಟ್ಟೆಗೆ-ಸಿದ್ಧವಾದ ಉತ್ಪನ್ನಗಳಾಗಿ ಪರಿವರ್ತಿಸುವುದರೊಂದಿಗೆ, ವಾಣಿಜ್ಯೀಕರಣ ಮತ್ತು ವ್ಯವಹಾರದ ಬೆಳವಣಿಗೆಯನ್ನು ಉತ್ತೇಜಿಸುವ ನಿಟ್ಟಿನಲ್ಲಿ ಉದ್ಯಮ ಮತ್ತು ಶೈಕ್ಷಣಿಕ ವಲಯದ ಸಹಯೋಗ, ತಜ್ಞರ ಮಾರ್ಗದರ್ಶನ, ಹೂಡಿಕೆದಾರರು ಮತ್ತು ಆರ್ಥಿಕ ಬೆಂಬಲ, ಹಾಗೂ ಮಾರುಕಟ್ಟೆ ಪ್ರವೇಶವನ್ನು ಸಹ ಇದು ಸುಗಮಗೊಳಿಸುತ್ತದೆ.

ಇದಲ್ಲದೆ, ನಿರ್ದಿಷ್ಟ ವಲಯ-ಕೇಂದ್ರಿತ ಪರಿಸರ ವ್ಯವಸ್ಥೆಯ ಮೂಲಕ ನವೋದ್ಯಮಗಳಿಗೆ ತರಬೇತಿ, ಕಾರ್ಯಾಗಾರಗಳು, ಬೂಟ್‌ಕ್ಯಾಂಪ್‌ಗಳು ಮತ್ತು ಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳನ್ನು ಒದಗಿಸಲಿವೆ.

- ಈ ಉಪಕ್ರಮದಡಿ, 2021 ರಿಂದ 13 ಉತ್ಕೃಷ್ಟತಾ ಕೇಂದ್ರಗಳನ್ನು ಸ್ಥಾಪಿಸಲು ರೂ.225 ಕೋಟಿ ಅನುದಾನವನ್ನು ಮಂಜೂರು ಮಾಡಲಾಗಿದೆ.

**ಮಾರ್ಗದರ್ಶನ ಮತ್ತು ಇನ್‌ಕ್ಯುಬೇಶನ್ ಸೌಲಭ್ಯ:** ಸರ್ಕಾರದ ಸಹಯೋಗದಲ್ಲಿ ರಾಜ್ಯದ ವಿವಿಧ ಭಾಗಗಳಲ್ಲಿ ಕೆ-ಟೆಕ್ ಇನ್ನ್ಯುಬೇಷನ್ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಇವುಗಳ ಮೂಲಕ ವರ್ಕ್‌ಶಾಪ್‌ಗಳು, ಬೂಟ್‌ಕ್ಯಾಂಪ್‌ಗಳು, ಹ್ಯಾಕಥಾನ್‌ಗಳು, ಇನ್ವೆಸ್ಟರ್ ಕನೆಕ್ಟ್ ಕಾರ್ಯಕ್ರಮಗಳು ಹಾಗೂ ಮೆಂಟರ್–ಮೆಂಟಿ ಸಂವಾದಗಳನ್ನು ನಿಯಮಿತವಾಗಿ ಆಯೋಜಿಸಲಾಗುತ್ತಿದೆ.

ನವೋದ್ಯಮಗಳು ನಿರಂತರವಾಗಿ ಮತ್ತು ಯಶಸ್ವಿಯಾಗಿ ಕಾರ್ಯನಿರ್ವಹಿಸಲು, ರಾಜ್ಯ ಸರ್ಕಾರವು ಕರ್ನಾಟಕ ನವೋದ್ಯಮ ನೀತಿಯಡಿ ಈ ಕೆಳಗಿನ ಪ್ರೋತ್ಸಾಹಕಗಳನ್ನು ನೀಡುತ್ತಿದೆ:

- **ರಾಜ್ಯ ಸರಕು ಮತ್ತು ಸೇವಾ ತೆರಿಗೆ ವೆಚ್ಚ (SGST) ಮರುಪಾವತಿ:** SGSTರ ಶೇಕಡಾ 50 ಅನ್ನು 7 ವರ್ಷಗಳ ಅವಧಿಗೆ ಮರುಪಾವತಿಸಲಾಗುತ್ತದೆ, ಸ್ಥಿರ ಬಂಡವಾಳ ಹೂಡಿಕೆಯ ಶೇಕಡಾ 100ಕ್ಕೆ ಮಿತಿಗೊಳಿಸಲಾಗಿದೆ. ರಾಜ್ಯಾದ್ಯಂತ ಎಲ್ಲಾ ನವೋದ್ಯಮಗಳಿಗೆ ಅನ್ವಯಿಸುತ್ತದೆ.

- **ಪೇಟೆಂಟ್ ವೆಚ್ಚ ಮರುಪಾವತಿ:** ಪಾಲಿಸಿ ಅವಧಿಯಲ್ಲಿ ಪೇಟೆಂಟ್ ಫೈಲಿಂಗ್ ವೆಚ್ಚದ ಶೇಕಡಾ 75 ಮರುಪಾವತಿ (ವರ್ಷಕ್ಕೆ ಗರಿಷ್ಠ ರೂ. 15 ಲಕ್ಷದವರೆಗೆ), ಇದು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಫೈಲಿಂಗ್‌ಗಳಿಗೆ ಅನ್ವಯವಾಗುತ್ತದೆ. ವರ್ಷಕ್ಕೆ ಗರಿಷ್ಠ ಐದು (5) ಕ್ಲೈಮ್‌ಗಳನ್ನು ಅನುಮತಿಸಲಾಗುತ್ತದೆ.
- **ಗುಣಮಟ್ಟ ಪ್ರಮಾಣೀಕರಣ ವೆಚ್ಚ ಮರುಪಾವತಿ:** ಪಾಲಿಸಿ ಅವಧಿಯಲ್ಲಿ ಗುಣಮಟ್ಟ ಪ್ರಮಾಣೀಕರಣ ಶುಲ್ಕದ ವೆಚ್ಚದ ಶೇಕಡಾ 50 ರವರೆಗೆ ಮರುಪಾವತಿಯನ್ನು (ರೂ.6 ಲಕ್ಷವರೆಗೂ) ನೀಡಲಾಗುತ್ತದೆ, (ಗರಿಷ್ಠ 5 ಉದ್ಯಮ ಪ್ರಮಾಣಿತ ಗುಣಮಟ್ಟದ ಪ್ರಮಾಣೀಕರಣ).
- **ಜಾಗತಿಕ ಕರ್ನಾಟಕ:** ಅಂತರರಾಷ್ಟ್ರೀಯ ಕಾರ್ಯಕ್ರಮಗಳು, ಸಮ್ಮೇಳನಗಳು, ವ್ಯಾಪಾರ ಪ್ರದರ್ಶನಗಳು ಮತ್ತು ಅಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ನವೋದ್ಯಮಗಳಿಗೆ ಖರ್ಚಿನ ಒಟ್ಟು ವೆಚ್ಚದ ಶೇಕಡಾ 40 ಮರುಪಾವತಿ ಮಾಡಲಾಗುತ್ತದೆ. ಈ ಪ್ರೋತ್ಸಾಹಕವು ಪಾಲಿಸಿ ಅವಧಿಯಲ್ಲಿ ಪ್ರತಿ ನವೋದ್ಯಮಕ್ಕೆ ವರ್ಷಕ್ಕೆ ಗರಿಷ್ಠ ರೂ.5 ಲಕ್ಷಗಳಿಗೆ ಒಳಪಟ್ಟಿರುತ್ತದೆ. ರಾಜ್ಯ ಬೆಂಬಲಿತ ಕಾರ್ಯಕ್ರಮಗಳು ಮತ್ತು ಸಮ್ಮೇಳನಗಳಲ್ಲಿ ಪ್ರದರ್ಶನ ನೀಡುವ ಸ್ಟಾರ್ಟ್‌ಅಪ್‌ಗಳಿಗೆ,

| | |
|---|---|
| | ಭಾಗವಹಿಸುವವರಿಗೆ ಆರಂಭಿಕ ವೆಚ್ಚವನ್ನು ಕಡಿಮೆ ಮಾಡಲು, ಪ್ರದರ್ಶನ ವೆಚ್ಚದ ಶೇಕಡಾ 50 ಅನ್ನು ಕಡಿತ ವೆಚ್ಚ ನೀಡಲಾಗುವುದು.<br>• **ಪಿಎಫ್/ಇಎಸ್ಐ ಮರುಪಾವತಿ:** ಉದ್ಯೋಗ ಸೃಷ್ಟಿಯನ್ನು ಉತ್ತೇಜಿಸಲು ಪ್ರತಿಯೊಬ್ಬ ಉದ್ಯೋಗಿಗೆ ಮಾಸಕ್ಕೆ ರೂ.3,000 ರಷ್ಟು PF/ESI ಮರುಪಾವತಿ ನೀಡಲಾಗುತ್ತದೆ. ಈ ಬೆಂಬಲ ಮೊದಲ ಎರಡು ವರ್ಷಗಳ ಹೊಸ ಉದ್ಯೋಗಿಗಳಿಗೆ ಅನ್ವಯಿಸುತ್ತದೆ ಮತ್ತು ಪ್ರತಿ ನವೋದ್ಯಮವು ಗರಿಷ್ಠ ರೂ.12 ಲಕ್ಷಗಳವರೆಗೆ ಮರುಪಾವತಿಯನ್ನು ಪಡೆಯಬಹುದು.<br>• **ಕ್ಲೌಡ್ ಸ್ಟೋರೇಜ್ ಮರುಪಾವತಿ:** ಸ್ಥಾಪನೆಯಾದ ಮೊದಲ ಐದು ವರ್ಷಗಳೊಳಗಿನ ಸ್ಟಾರ್ಟ್‌ಅಪ್‌ಗಳು ಕ್ಲೌಡ್ ಕಂಪ್ಯೂಟಿಂಗ್ ಮತ್ತು ಸ್ಟೋರೇಜ್‌ಗಾಗಿ ಮಾಡುವ ವೆಚ್ಚಗಳ ಮೇಲೆ ವರ್ಷಕ್ಕೆ ರೂ.1 ಲಕ್ಷದವರೆಗೆ ಶೇಕಡ 40 ರಷ್ಟು ವೆಚ್ಚಗಳ ಮರುಪಾವತಿಗೆ ಅರ್ಹರಾಗಿರುತ್ತಾರೆ. ಈ ಪ್ರಯೋಜನವನ್ನು ಪಾಲಿಸಿ ಅವಧಿಯಲ್ಲಿ ಒಮ್ಮೆ ಮಾತ್ರ ಪಡೆಯಬಹುದು.<br>• **ಸಂಶೋಧನೆ ಮತ್ತು ಅಭಿವೃದ್ಧಿ ಯೋಜನೆಯ ಅನುದಾನಗಳು:** ಪಾಲಿಸಿಯ ಅವಧಿಯಲ್ಲಿ ಮೊದಲ 25 ಯೋಜನೆಗಳಿಗೆ ಸಂಶೋಧನಾ ಯೋಜನೆಯ ಒಟ್ಟು ವೆಚ್ಚದ ಶೇಕಡ 50ರಷ್ಟು ವರೆಗೆ ರೂ.1 ಕೋಟಿಗೆ ಸೀಮಿತಗೊಳಿಸಲಾಗಿದೆ. ಇದು ಟ್ರಿಪಲ್ ಹೆಲಿಕ್ಸ್ ಮಾದರಿ (ಉದ್ಯಮ-ಶೈಕ್ಷಣಿಕ-ಸ್ಟಾರ್ಟ್‌ಅಪ್‌ಗಳು) ಅಡಿಯಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ಯೋಜನೆಗಳನ್ನು ಬೆಂಬಲಿಸುವುದಕ್ಕಾಗಿ ಇರುತ್ತದೆ.<br>• **ಇಂಟರ್ನ್‌ಶಿಪ್ ಬೆಂಬಲ:** ರಾಜ್ಯಾದ್ಯಂತ ಗರಿಷ್ಠ 3 ಇಂಟರ್ನ್‌ಗಳನ್ನು 6 ತಿಂಗಳವರೆಗೆ ನೇಮಿಸಿಕೊಳ್ಳಲು ಪ್ರತಿ ಸ್ಟಾರ್ಟ್‌ಅಪ್‌ಗೆ ತಿಂಗಳಿಗೆ ರೂ.5000 ವರೆಗೆ ಸಬ್ಸಿಡಿ ನೀಡಲಾಗುತ್ತದೆ. ಪಾಲಿಸಿಯ ಅವಧಿಯಲ್ಲಿ ಇದನ್ನು ಮೂರು ಬಾರಿ ಪಡೆಯಬಹುದು. ಈ ಪ್ರಯೋಜನವನ್ನು ಯುವ ನಿಧಿ ಯೋಜನೆಯೊಂದಿಗೆ ಸೇರಿಸಲಾಗುವುದಿಲ್ಲ.<br>• **ಕಿಟ್ವೆನ್ ಫಂಡ್ 5 (KITVEN FUND 5):** ಕೃತಕ ಬುದ್ಧಿಮತ್ತೆ (AI), ಯಂತ್ರ ಕಲಿಕೆ (ML), ಮೆಡ್‌ಟೆಕ್, ರೊಬೊಟಿಕ್ಸ್ ಮತ್ತು ಇತರ ಉದಯೋನ್ಮುಖ ತಂತ್ರಜ್ಞಾನ ಕ್ಷೇತ್ರಗಳಾದ್ಯಂತ ಡೀಪ್‌ಟೆಕ್ (DeepTech) ಮತ್ತು ಡಿಸ್ರಪ್ಟಿವ್ ತಂತ್ರಜ್ಞಾನದ ಸ್ಟಾರ್ಟ್-ಅಪ್‌ಗಳಲ್ಲಿ ಹೂಡಿಕೆ ಮಾಡುವತ್ತ ಗಮನಹರಿಸುವುದರೊಂದಿಗೆ ರೂ. 100 ಕೋಟಿ ನಿಧಿಯೊಂದಿಗೆ 'ಕಿಟ್ವೆನ್ ಫಂಡ್-5' (KITVEN Fund-5) ತನ್ನ ಕಾರ್ಯಾಚರಣೆಯನ್ನು ಆರಂಭಿಸಿದೆ. ಅತ್ಯಾಧುನಿಕ ತಂತ್ರಜ್ಞಾನಗಳು ಮತ್ತು ವಿಸ್ತರಿಸಬಹುದಾದ (scalable) ಪರಿಹಾರಗಳ |

| | |
|---|---|
| | ಅಭಿವೃದ್ಧಿಯಲ್ಲಿ ತೊಡಗಿರುವ ಹೆಚ್ಚಿನ ಸಾಮರ್ಥ್ಯದ ಸ್ಟಾರ್ಟ್-ಅಪ್‌ಗಳನ್ನು ಬೆಂಬಲಿಸುವ ಮೂಲಕ ಕರ್ನಾಟಕದ ನಾವೀನ್ಯತಾ ಪರಿಸರ ವ್ಯವಸ್ಥೆಯನ್ನು ಬಲಪಡಿಸುವ ಗುರಿಯನ್ನು ಈ ನಿಧಿಯು ಹೊಂದಿದೆ. ಜೊತೆಗೆ ಕಾರ್ಯತಂತ್ರದ ಹೂಡಿಕೆಗಳ ಮೂಲಕ ತಾಂತ್ರಿಕ ನಾವೀನ್ಯತೆ, ಉದ್ಯಮಶೀಲತೆ ಮತ್ತು ಉದ್ಯೋಗ ಸೃಷ್ಟಿಯನ್ನು ಉತ್ತೇಜಿಸುತ್ತಾ, ಡೀಪ್‌ಟೆಕ್ ಸ್ಟಾರ್ಟ್-ಅಪ್‌ಗಳ ಪ್ರಮುಖ ಕೇಂದ್ರವಾಗಿ ಕರ್ನಾಟಕದ ಸ್ಥಾನಮಾನವನ್ನು ಮತ್ತಷ್ಟು ಎತ್ತರಿಸುವ ಉದ್ದೇಶವನ್ನು ಇದು ಹೊಂದಿದೆ.<br>• **ಫಂಡ್ ಆಫ್ ಫಂಡ್ಸ್ (FUND of FUNDS):** ರಾಜ್ಯದಾದ್ಯಂತ, ವಿಶೇಷವಾಗಿ 'ಬೆಂಗಳೂರಿನ ಹೊರಗಿನ' (Beyond Bangalore) ಕ್ಲಸ್ಟರ್‌ಗಳಲ್ಲಿನ ಉದಯೋನ್ಮುಖ ಸ್ಟಾರ್ಟ್-ಅಪ್ ಪರಿಸರ ವ್ಯವಸ್ಥೆಯಲ್ಲಿ ದೃಢವಾದ ಮತ್ತು ಸ್ವಾವಲಂಬಿಯಾದ ಸಾಹಸೋದ್ಯಮ ಬಂಡವಾಳ (ವೆಂಚರ್ ಕ್ಯಾಪಿಟಲ್) ಮಾದರಿಯನ್ನು ಉತ್ತೇಜಿಸುವ ಉದ್ದೇಶದಿಂದ 'LEAP' ಅಡಿಯಲ್ಲಿ 200 ಕೋಟಿ ರೂ.ಗಳ ಬಜೆಟ್‌ನೊಂದಿಗೆ 'ಫಂಡ್ ಆಫ್ ಫಂಡ್ಸ್' ಅನ್ನು ಸ್ಥಾಪಿಸಲಾಗುವುದು. 'FoF' ನ ಪ್ರಮುಖ ಅಂಶಗಳನ್ನು ಗುರುತಿಸಲು ಪ್ರಸ್ತುತ 'KITVEN', ಪಾಲುದಾರರೊಂದಿಗೆ ಹಾಗೂ ಸಂಭಾವ್ಯ ಹೂಡಿಕೆದಾರರೊಂದಿಗೆ ಚರ್ಚೆ ಮತ್ತು ಸಮಾಲೋಚನೆಯು ನಡೆಯುತ್ತಿದೆ. |
| (ಇ) ರಾಷ್ಟ್ರೀಯ ಸ್ಟಾರ್ಟ್ ಅಪ್ ಶ್ರೇಯಾಂಕದಲ್ಲಿ (National Startup Rankings) ರಾಜ್ಯದ ಪ್ರಸ್ತುತ ಸ್ಥಾನವೇನು ಹಾಗೂ ರಾಜ್ಯದ ಡಿಜಿಟಲ್ ಆರ್ಥಿಕತೆಯ ಬೆಳವಣಿಗೆಗೆ ಮತ್ತು ಹೊಸ ಉದ್ಯೋಗ ಸೃಷ್ಟಿಗೆ ಈ ಸ್ಟಾರ್ಟ್ ಅಪ್‌ಗಳು ನೀಡುತ್ತಿರುವ ಕೊಡುಗೆಯ ವಿವರವೇನು; | ಭಾರತ ಸರ್ಕಾರದ ಕೈಗಾರಿಕೆ ಮತ್ತು ಆಂತರಿಕ ವ್ಯಾಪಾರ ಉತ್ತೇಜನ ಇಲಾಖೆ (DPIIT) ನಡೆಸಿದ 2025ರ 'ರಾಜ್ಯಗಳ ಸ್ಟಾರ್ಟಪ್ ಪರಿಸರ ವ್ಯವಸ್ಥೆ ಶ್ರೇಯಾಂಕ'ದ 5ನೇ ಆವೃತ್ತಿಯಲ್ಲಿ, 'ಎ' ವರ್ಗದ ರಾಜ್ಯಗಳ ವಿಭಾಗದಲ್ಲಿ ಕರ್ನಾಟಕವನ್ನು "ಟಾಪ್ ಪರ್ಫಾರ್ಮರ್" (Top Performer) ಎಂದು ಗುರುತಿಸಲಾಗಿದೆ. ಶ್ರೇಯಾಂಕ ಚೌಕಟ್ಟಿನ ಅಡಿಯಲ್ಲಿ ಬರುವ ಎಲ್ಲಾ ಆರು ಸುಧಾರಣಾ ಕ್ಷೇತ್ರಗಳು ಹಾಗೂ 19 ಕ್ರಿಯಾ ಅಂಶಗಳಲ್ಲಿ ರಾಜ್ಯವು ಪಾಲ್ಗೊಂಡಿತ್ತು. ಕರ್ನಾಟಕವು ಸಾಂಸ್ಥಿಕ ಬೆಂಬಲದಲ್ಲಿ ಶೇಕಡಾ 80 ರಷ್ಟು, ಮೂಲಸೌಕರ್ಯ ಬೆಂಬಲದಲ್ಲಿ ಶೇಕಡಾ 71 ರಷ್ಟು, ಆರ್ಥಿಕ ಬೆಂಬಲದಲ್ಲಿ ಶೇಕಡಾ 70 ರಷ್ಟು, ಮಾರುಕಟ್ಟೆ ಪ್ರವೇಶ ಮತ್ತು ವ್ಯಾಪ್ತಿಯಲ್ಲಿ ಶೇಕಡಾ 88 ರಷ್ಟು, ಪರಿಸರ ವ್ಯವಸ್ಥೆ ಸಾಮರ್ಥ್ಯ ವರ್ಧನೆಯಲ್ಲಿ ಶೇಕಡಾ 67 ರಷ್ಟು ಹಾಗೂ ನಾವೀನ್ಯತೆ ಮತ್ತು ಸುಸ್ಥಿರತೆಯ ಮೇಲಿನ ಗಮನ ವಿಭಾಗದಲ್ಲಿ ಶೇಕಡಾ 100 ರಷ್ಟು ಅಂಕಗಳನ್ನು ಗಳಿಸಿತು.<br><br>ಕರ್ನಾಟಕವು ದೇಶದ ಅತ್ಯಂತ ಪ್ರಬುದ್ಧ ಸ್ಟಾರ್ಟಅಪ್ ಪರಿಸರ ವ್ಯವಸ್ಥೆಗಳಲ್ಲಿ ಒಂದಾಗಿದ್ದು, 'ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ' (KITS) ಯಲ್ಲಿ 2021 ರಿಂದ ಇಲ್ಲಿಯವರೆಗೆ ಸುಮಾರು 2584 |

| | |
|---|---|
| | ನವೋದ್ಯಮಗಳು ನೋಂದಾಯಿಸಿಕೊಂಡಿವೆ. ಅಂದಾಜು 7,000ಕ್ಕೂ ಹೆಚ್ಚು ಉದ್ಯೋಗಗಳು ಸೃಷ್ಟಿಯಾಗಿವೆ ಎಂದು ಅಂದಾಜಿಸಲಾಗಿದೆ.<br><br>ಸ್ಟಾರ್ಟಪ್ ಜೀನೋಮ್ (Startup Genome) ಸಂಸ್ಥೆಯು ಬಿಡುಗಡೆ ಮಾಡಿರುವ 'ಜಾಗತಿಕ ಸ್ಟಾರ್ಟಪ್ ಪರಿಸರ ವ್ಯವಸ್ಥೆ ವರದಿ 2026' ರಲ್ಲಿ (Global Startup Ecosystem Report 2026) ಬೆಂಗಳೂರು ಜಾಗತಿಕವಾಗಿ 15ನೇ ಸ್ಥಾನವನ್ನು ಪಡೆದುಕೊಂಡಿದ್ದು, ಪ್ರಮುಖ ನಾವೀನ್ಯತೆ ಮತ್ತು ಉದ್ಯಮಶೀಲತಾ ಕೇಂದ್ರವಾಗಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡಿದೆ. ನಗರದ ಸ್ಟಾರ್ಟಅಪ್ ಪರಿಸರ ವ್ಯವಸ್ಥೆಯ ಮೌಲ್ಯವು ಅಂದಾಜು ರೂ.14.64 ಲಕ್ಷ ಕೋಟಿ ($ 153 Billion) ಗಳಷ್ಟಿದೆ. ಸ್ಟಾರ್ಟಅಪ್ ಕಾರ್ಯಕ್ಷಮತೆ, ಬಂಡವಾಳ ಹೂಡಿಕೆ (Funding), ಮಾರುಕಟ್ಟೆ ವ್ಯಾಪ್ತಿ, ಪ್ರತಿಭೆಗಳ ಲಭ್ಯತೆ, ಕೃತಕ ಬುದ್ಧಿಮತ್ತೆ (AI) ಸಾಮರ್ಥ್ಯಗಳು ಮತ್ತು ಸಂಶೋಧನೆ ಹಾಗೂ ಅಭಿವೃದ್ಧಿ (R&D) ಸಾಮರ್ಥ್ಯದಂತಹ ಪ್ರಮುಖ ಸೂಚಕಗಳಲ್ಲಿ ಇದು ಬಲವಾದ ಸಾಧನೆಯನ್ನು ತೋರುತ್ತಿದ್ದು, ರಾಜ್ಯದ ಡಿಜಿಟಲ್ ಆರ್ಥಿಕತೆಗೆ ಮಹತ್ವದ ಕೊಡುಗೆ ನೀಡುತ್ತಿದೆ.<br><br>2021 ಮತ್ತು 2025ರ ನಡುವೆ ಬೆಂಗಳೂರು ಸುಮಾರು ರೂ.3.73 ಲಕ್ಷ ಕೋಟಿ ($39 Billion) ವೆಂಚರ್ ಕಾಪಿಟಲ್ ಹೂಡಿಕೆಯನ್ನು (Venture Capital Funding) ಆಕರ್ಷಿಸಿದೆ ಮತ್ತು 30 ಸಕ್ರಿಯ ಯುನಿಕಾರ್ನ್‌ಗಳನ್ನು ಹೊಂದಿದೆ. ಇದು ಕೃತಕ ಬುದ್ಧಿಮತ್ತೆ (AI), ಡೀಪ್‌ಟೆಕ್ (DeepTech) ಮತ್ತು ಉದಯೋನ್ಮುಖ ತಂತ್ರಜ್ಞಾನಗಳಲ್ಲಿ ಗಮನಾರ್ಹ ಸಾಮರ್ಥ್ಯಗಳನ್ನು ಹೊಂದಿರುವ ಪ್ರಬುದ್ಧ ಹಾಗೂ ಹೂಡಿಕೆಗೆ ಸಿದ್ಧವಾಗಿರುವ ಪರಿಸರ ವ್ಯವಸ್ಥೆಯನ್ನು ಪ್ರತಿಬಿಂಬಿಸುತ್ತದೆ. |
| (ಈ) ಬೆಂಗಳೂರು ಹೊರತುಪಡಿಸಿ, ರಾಜ್ಯದ ದ್ವಿತೀಯ ಮತ್ತು ತೃತೀಯ ಹಂತದ ನಗರಗಳಲ್ಲಿ (Beyond Bengaluru Initiative /Tier-2 & Tier-3 Cities) ನಾವೀನ್ಯತೆ ಸ್ಟಾರ್ಟ್ ಅಪ್ ಸಂಸ್ಕೃತಿಯನ್ನು ಪ್ರೋತ್ಸಾಹಿಸಲು ಸರ್ಕಾರ ಕೈಗೊಂಡಿರುವ ವಿಶೇಷ ಕ್ರಮಗಳು ಮತ್ತು ಯೋಜನೆಗಳೇನು? (ಸಂಪೂರ್ಣ ವಿವರ ನೀಡುವುದು | ಕರ್ನಾಟಕ ಸರ್ಕಾರವು ಬೆಂಗಳೂರಿನ ಹೊರಗಿನ ಪ್ರದೇಶಗಳಲ್ಲಿ (ರಾಜ್ಯದ ದ್ವಿತೀಯ ಮತ್ತು ತೃತೀಯ ಹಂತದ ನಗರಗಳಲ್ಲಿ) ಸ್ಟಾರ್ಟ್‌ಅಪ್ ಸಂಸ್ಕೃತಿ, ನಾವೀನ್ಯತೆ ಮತ್ತು ಉದ್ಯಮಶೀಲತೆಯನ್ನು ಉತ್ತೇಜಿಸಲು ಈ ಕೆಳಗಿನ ಉಪಕ್ರಮಗಳನ್ನು ಕೈಗೊಂಡಿದೆ:-<br><br>**ಸ್ಥಳೀಯ ಆರ್ಥಿಕತೆ ವೇಗವರ್ಧಕ ಕಾರ್ಯಕ್ರಮ (LEAP)** ಎಂಬುದು ಕರ್ನಾಟಕ ಸರ್ಕಾರದ ಒಂದು ಮಹತ್ವದ ಉಪಕ್ರಮವಾಗಿದೆ. ಇದು ನಾವೀನ್ಯತೆಯನ್ನು ವಿಕೇಂದ್ರೀಕರಿಸಲು, **5 ಲಕ್ಷ ಉದ್ಯೋಗಗಳನ್ನು** ಸೃಷ್ಟಿಸಲು ಮತ್ತು 'ಬಿಯಾಂಡ್ ಬೆಂಗಳೂರು' (**ಬೆಂಗಳೂರು ಹೊರತಾದ**) ಸ್ಟಾರ್ಟ್‌ಅಪ್ ಪರಿಸರ ವ್ಯವಸ್ಥೆಯನ್ನು ಬಲಪಡಿಸಲು ರೂಪಿಸಲಾದ **ರೂ. 1,000 ಕೋಟಿ ವೆಚ್ಚದ, 5 ವರ್ಷಗಳ ಯೋಜನೆಯಾಗಿದೆ.** ಮೈಸೂರು, ಮಂಗಳೂರು, ಹುಬ್ಬಳ್ಳಿ, ಬೆಳಗಾವಿ, ಧಾರವಾಡ, ತುಮಕೂರು, ಕಲಬುರಗಿ ಮತ್ತು ಶಿವಮೊಗ್ಗದಂತಹ ನಗರಗಳನ್ನು ಆಯಕಟ್ಟಿನ ಕೇಂದ್ರಗಳನ್ನಾಗಿ ಗುರಿಯಾಗಿಸುವ ಮೂಲಕ, ಉದ್ಯಮಶೀಲತೆ ಮತ್ತು ತಂತ್ರಜ್ಞಾನದ ಲಭ್ಯತೆಯನ್ನು |

ಎಲ್ಲರಿಗೂ ಸಮಾನವಾಗಿ ಹಂಚುವುದು 'ಲೀಪ್' (LEAP)ನ ಉದ್ದೇಶವಾಗಿದೆ.

**ಎಲಿವೇಟ್ ನೆಕ್ಸ್ಟ್ (ELEVATE NxT):** ರಾಜ್ಯದ ಡೀಪ್-ಟೆಕ್ ಪರಿಸರ ವ್ಯವಸ್ಥೆಯನ್ನು ಬಲಪಡಿಸುವ ಗುರಿ ಹೊಂದಿರುವ LEAP ಯೋಜನೆಯ 'ELEVATE NxT' ಕಾರ್ಯಕ್ರಮದಡಿ ಉದಯೋನ್ಮುಖ ತಂತ್ರಜ್ಞಾನದ ಡೀಪ್-ಟೆಕ್ ನವೋದ್ಯಮಗಳಿಗೆ ಗರಿಷ್ಠ ರೂ.1 ಕೋಟಿ ವರೆಗೆ ಆರ್ಥಿಕ ಸಹಾಯವನ್ನು ಒದಗಿಸಿ ಪ್ರೋತ್ಸಾಹ ನೀಡಲಾಗುತ್ತಿದೆ.

**ಗ್ರೋತ್ ಲ್ಯಾಬ್ (Growth Labs):** ಈ ಲ್ಯಾಬ್ ಗಳನ್ನು ಆಧುನಿಕ ಸಹ-ಕಾರ್ಯನಿರ್ವಹಣಾ ಮತ್ತು ನಾವೀನ್ಯತಾ ಕೇಂದ್ರಗಳಾಗಿ ರೂಪಿಸಲಾಗುತ್ತಿದ್ದು, ಸ್ಟಾರ್ಟ್‌ಅಪ್‌ಗಳಿಗೆ ಹಂಚಿಕೆಯ ಮೂಲಸೌಕರ್ಯ, ಇನ್‌ಕ್ಯುಬೇಷನ್ ಬೆಂಬಲ, ಮಾರ್ಗದರ್ಶನ ಮತ್ತು ಪರಿಸರ ವ್ಯವಸ್ಥೆಯ ಸಂಪರ್ಕಗಳನ್ನು ಒದಗಿಸುವ ಮೂಲಕ ನಾವೀನ್ಯತೆ ಹಾಗೂ ಉದ್ಯಮದ ಬೆಳವಣಿಗೆಗೆ ಉತ್ತೇಜನ ನೀಡಲಾಗುತ್ತದೆ. ಈ ಉಪಕ್ರಮದಡಿ ಹೊಸ ಸೌಲಭ್ಯಗಳನ್ನು ಸ್ಥಾಪಿಸುವುದರ ಜೊತೆಗೆ ಅಸ್ತಿತ್ವದಲ್ಲಿರುವ ಮೂಲಸೌಕರ್ಯವನ್ನು ಬಲಪಡಿಸಿ, ವಿಶೇಷವಾಗಿ ಬೆಂಗಳೂರಿನ ಹೊರಗಿನ ಪ್ರದೇಶಗಳಲ್ಲಿ Plug-and-Play ಸ್ಟಾರ್ಟ್‌ಅಪ್ ಹಬ್‌ಗಳ ಜಾಲವನ್ನು ನಿರ್ಮಿಸಲಾಗುತ್ತಿದೆ. ಹುಬ್ಬಳ್ಳಿ, ಕಲಬುರಗಿ, ಹೊಸಕೋಟೆ ಮತ್ತು ಮೈಸೂರು ಸೇರಿದಂತೆ ವಿವಿಧ ಪ್ರದೇಶಗಳಲ್ಲಿ ಸಮತೋಲನದ ಪ್ರಾದೇಶಿಕ ಅಭಿವೃದ್ಧಿ ಹಾಗೂ ಚೈತನ್ಯಮಯ ನಾವೀನ್ಯತಾ ಪರಿಸರ ವ್ಯವಸ್ಥೆಯನ್ನು ಉತ್ತೇಜಿಸುವುದು ಇದರ ಉದ್ದೇಶವಾಗಿದೆ.

**ಉತ್ಕೃಷ್ಟತಾ ಕೇಂದ್ರಗಳು (Centres of Excellence – CoEs):** ಉದಯೋನ್ಮುಖ ತಂತ್ರಜ್ಞಾನ ಮತ್ತು ವಲಯಾಧಾರಿತ ಕ್ಷೇತ್ರಗಳಲ್ಲಿ ಒಟ್ಟು **06 ಉತ್ಕೃಷ್ಟತಾ ಕೇಂದ್ರಗಳನ್ನು (CoEs)** ಸ್ಥಾಪಿಸಲಾಗುತ್ತಿದ್ದು, ಅವುಗಳಲ್ಲಿ ನಾಲ್ಕು ಕೇಂದ್ರಗಳು ಈಗಾಗಲೇ ಸ್ಥಾಪನೆಯಾಗಿವೆ.

**ರಕ್ಷಣಾ ತಂತ್ರಜ್ಞಾನ ಮತ್ತು ಇಂಡಸ್ಟ್ರಿ 5.0 CoE:** IIT ಧಾರವಾಡದ **dhaRti Foundation** ನಲ್ಲಿ ರಕ್ಷಣಾ ತಂತ್ರಜ್ಞಾನ ಮತ್ತು ಇಂಡಸ್ಟ್ರಿ 5.0 ಕ್ಷೇತ್ರದಲ್ಲಿ ಉತ್ಕೃಷ್ಟತಾ ಕೇಂದ್ರವನ್ನು ಸ್ಥಾಪಿಸಲಾಗಿದೆ. ಈ ಕೇಂದ್ರಕ್ಕೆ ಐದು ವರ್ಷಗಳ ಅವಧಿಯಲ್ಲಿ ಒಟ್ಟು ರೂ.18 ಕೋಟಿ ಅನುದಾನ ಒದಗಿಸಲಾಗುತ್ತಿದೆ.

ಈ CoE ಮೂಲಕ 100ಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳಿಗೆ ಅತ್ಯಾಧುನಿಕ ಸಂಶೋಧನೆ ಮತ್ತು ಅಭಿವೃದ್ಧಿ ಮೂಲಸೌಕರ್ಯ, ಇನ್‌ಕ್ಯುಬೇಷನ್ ಸೌಲಭ್ಯಗಳು, ತಜ್ಞರ ಮಾರ್ಗದರ್ಶನ ಹಾಗೂ ಕೈಗಾರಿಕೆ–ಶೈಕ್ಷಣಿಕ

ಸಹಭಾಗಿತ್ವವನ್ನು ಒದಗಿಸಲಾಗುತ್ತದೆ. ಅತ್ಯಾಧುನಿಕ ತಂತ್ರಜ್ಞಾನಗಳನ್ನು ವಾಣಿಜ್ಯಿಕವಾಗಿ ಕಾರ್ಯಸಾಧ್ಯವಾದ ಪರಿಹಾರಗಳಾಗಿ ಪರಿವರ್ತಿಸುವುದು, ನಾವೀನ್ಯತೆ ಆಧಾರಿತ ಉದ್ಯಮಗಳನ್ನು ಬೆಳೆಸುವುದು, ಹಣಕಾಸು ಅವಕಾಶಗಳಿಗೆ ಸಂಪರ್ಕ ಕಲ್ಪಿಸುವುದು ಹಾಗೂ ಕೌಶಲ್ಯಾಭಿವೃದ್ಧಿ ಮತ್ತು ಮರುಕೌಶಲ್ಯಾಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಸಾಮರ್ಥ್ಯ ನಿರ್ಮಿಸುವುದು ಇದರ ಪ್ರಮುಖ ಉದ್ದೇಶಗಳಾಗಿವೆ.

**ಕ್ವಾಂಟಮ್ ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ ಮತ್ತು ಕಂಪ್ಯೂಟಿಂಗ್ (QAIC) CoE:** IIIT ಧಾರವಾಡದಲ್ಲಿ ಸ್ಥಾಪಿಸಲಾಗುತ್ತಿರುವ **Quantum Artificial Intelligence and Computing (QAIC) CoE**, ಭಾರತದ ರಾಷ್ಟ್ರೀಯ ಕ್ವಾಂಟಮ್ ಮಿಷನ್ ಮತ್ತು ಕರ್ನಾಟಕದ Quantum Visionಗೆ ಹೊಂದಿಕೆಯಾಗಿದ್ದು, ಉತ್ತರ ಕರ್ನಾಟಕವನ್ನು ಕ್ವಾಂಟಮ್ ಕಂಪ್ಯೂಟಿಂಗ್, ಕೃತಕ ಬುದ್ಧಿಮತ್ತೆ ಮತ್ತು ಸುರಕ್ಷಿತ ಸಂವಹನ ತಂತ್ರಜ್ಞಾನಗಳ ಪ್ರಮುಖ ಕೇಂದ್ರವನ್ನಾಗಿ ರೂಪಿಸುವ ಗುರಿ ಹೊಂದಿದೆ. ಈ CoE ಮೂಲಕ ಸಂಶೋಧನೆ, ನಾವೀನ್ಯತೆ, ಕೈಗಾರಿಕಾ ಸಹಭಾಗಿತ್ವ, ಸ್ಟಾರ್ಟ್‌ಅಪ್ ಇನ್‌ಕ್ಯುಬೇಷನ್ ಮತ್ತು ಕೌಶಲ್ಯಾಭಿವೃದ್ಧಿಗೆ ಉತ್ತೇಜನ ನೀಡಲಾಗುತ್ತದೆ. ಸೈಬರ್‌ಸುರಕ್ಷತೆ, ಔಷಧ ಅನ್ವೇಷಣೆ, ಹಣಕಾಸು ಮಾದರೀಕರಣ ಮತ್ತು ಬಾಹ್ಯಾಕಾಶ ತಂತ್ರಜ್ಞಾನಗಳು ಪ್ರಮುಖ ಗಮನಹರಿಸುವ ಕ್ಷೇತ್ರಗಳಾಗಿವೆ. ಐದು ವರ್ಷಗಳ ಅವಧಿಯಲ್ಲಿ ಅಂದಾಜು ರೂ.18 ಕೋಟಿ ಹೂಡಿಕೆಯೊಂದಿಗೆ ಈ ಉಪಕ್ರಮವು ಪ್ರಾದೇಶಿಕ ತಾಂತ್ರಿಕ ಬೆಳವಣಿಗೆಯನ್ನು ಬಲಪಡಿಸುವುದರ ಜೊತೆಗೆ ಕ್ವಾಂಟಮ್–AI ಕ್ಷೇತ್ರದಲ್ಲಿ ಕರ್ನಾಟಕವನ್ನು ಮುಂಚೂಣಿ ರಾಜ್ಯವನ್ನಾಗಿ ರೂಪಿಸಲು ಸಹಕಾರಿಯಾಗಲಿದೆ.

**ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿನ CoE– ಗ್ರಾಮೀಣ ಕೇಂದ್ರೀಕೃತ ಮಧ್ಯಸ್ಥಿಕೆ:** Krishi Kalpa ಸಹಭಾಗಿತ್ವದಲ್ಲಿ ಕಲಬುರಗಿಯಲ್ಲಿ ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳಿಗಾಗಿ ರೂ.16.50 ಕೋಟಿ ಅನುದಾನದೊಂದಿಗೆ ಐದು ವರ್ಷಗಳ ಅವಧಿಯಲ್ಲಿ ಉತ್ಕೃಷ್ಟತಾ ಕೇಂದ್ರವನ್ನು ಸ್ಥಾಪಿಸಲಾಗಿದೆ. ಈ ಕೇಂದ್ರವು Agri-Tech ಕ್ಷೇತ್ರವನ್ನು ಬಲಪಡಿಸುವುದು, ರೈತ ಉತ್ಪಾದಕರ ಸಂಸ್ಥೆಗಳಿಗೆ (FPOs) ಬೆಂಬಲ ನೀಡುವುದು, ಗ್ರಾಮೀಣ ನಾವೀನ್ಯತೆಯನ್ನು ಉತ್ತೇಜಿಸುವುದು, ತಂತ್ರಜ್ಞಾನ ಅಳವಡಿಕೆಯನ್ನು ಹೆಚ್ಚಿಸುವುದು ಹಾಗೂ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದನ್ನು ಉದ್ದೇಶಿಸಿದೆ.

**ಕೃತಕ ಬುದ್ಧಿಮತ್ತೆ (AI) CoE – IIIT ರಾಯಚೂರು:** ಉತ್ತರ ಕರ್ನಾಟಕದಲ್ಲಿ AI ಸಾಮರ್ಥ್ಯಗಳನ್ನು ಬಲಪಡಿಸುವ ಮತ್ತು ಪ್ರಾದೇಶಿಕ ತಂತ್ರಜ್ಞಾನ ಪರಿಸರ ವ್ಯವಸ್ಥೆಯ ಅಂತರವನ್ನು ಕಡಿಮೆ ಮಾಡುವ ಉದ್ದೇಶದಿಂದ **IIIT ರಾಯಚೂರಿನಲ್ಲಿ ರೂ. 12 ಕೋಟಿ**

| | |
|---|---|
| | **ಹೂಡಿಕೆಯೊಂದಿಗೆ ಐದು ವರ್ಷಗಳ ಅವಧಿಗೆ AI CoE** ಸ್ಥಾಪಿಸಲಾಗುತ್ತಿದೆ. AI ಶಿಕ್ಷಣ ಮತ್ತು ಸಾಮರ್ಥ್ಯ ನಿರ್ಮಾಣ, ಅತ್ಯಾಧುನಿಕ AI ಮೂಲಸೌಕರ್ಯ ಮತ್ತು ಅಭಿವೃದ್ಧಿ ಪ್ರಯೋಗಾಲಯಗಳು, ನಾವೀನ್ಯತೆ ಮತ್ತು ಉದ್ಯಮಶೀಲತೆ ಹಾಗೂ ಪ್ರಾದೇಶಿಕ ವ್ಯಾಪ್ತಿ ಇದರ ಪ್ರಮುಖ ಕೇಂದ್ರೀಕೃತ ಕ್ಷೇತ್ರಗಳಾಗಿವೆ. ಈ ಕೇಂದ್ರವು ಸಂಶೋಧನೆ, ಸ್ಟಾರ್ಟ್‌ಅಪ್‌ಗಳು, ಕೈಗಾರಿಕೆ-ಶೈಕ್ಷಣಿಕ ಸಹಭಾಗಿತ್ವ ಹಾಗೂ ನುರಿತ ಮಾನವ ಸಂಪನ್ಮೂಲದ ಅಭಿವೃದ್ಧಿಗೆ ಉತ್ತೇಜನ ನೀಡಲಿದೆ.<br><br>**ಇನ್ನೊವೇಷನ್ ಲ್ಯಾಬ್ಸ್:** ವಿದ್ಯಾರ್ಥಿಗಳಲ್ಲಿ ನಾವೀನ್ಯತೆ ಮತ್ತು ಸೃಜನಶೀಲತೆಯನ್ನು ಉತ್ತೇಜಿಸುವ ಉದ್ದೇಶದಿಂದ ಬೆಂಗಳೂರಿನ ಹೊರಗಿನ ಪ್ರದೇಶಗಳ ಶಾಲೆಗಳು ಮತ್ತು ಕಾಲೇಜುಗಳಲ್ಲಿ **20 ಅತ್ಯಾಧುನಿಕ Innovation Labs** ಸ್ಥಾಪಿಸಲಾಗುತ್ತಿದೆ. ಈ ಪ್ರಯೋಗಾಲಯಗಳು ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತ (STEM) ಕ್ಷೇತ್ರಗಳಲ್ಲಿ ಪ್ರಾಯೋಗಿಕ ಕಲಿಕೆಗೆ ವೇದಿಕೆಯಾಗಲಿವೆ. ವಿದ್ಯಾರ್ಥಿಗಳಿಗೆ 3D ಪ್ರಿಂಟರ್‌ಗಳು, ರೋಬೋಟಿಕ್ಸ್ ಕಿಟ್‌ಗಳು, IoT ಸಾಧನಗಳು ಸೇರಿದಂತೆ ವಿವಿಧ ಅತ್ಯಾಧುನಿಕ ಉಪಕರಣಗಳಿಗೆ ಪ್ರವೇಶ ಕಲ್ಪಿಸಲಾಗುತ್ತದೆ. ವಿನ್ಯಾಸ ಚಿಂತನೆ, ಸಮಸ್ಯೆ ಪರಿಹಾರ ಕೌಶಲ್ಯ ಮತ್ತು ನೈಜ ಜೀವನದ ಸಮಸ್ಯೆಗಳಿಗೆ ಪರಿಹಾರಗಳನ್ನು ಅಭಿವೃದ್ಧಿಪಡಿಸುವ ಸಾಮರ್ಥ್ಯವನ್ನು ಬೆಳೆಸುವುದು ಇದರ ಉದ್ದೇಶವಾಗಿದೆ. ಈ ಕಾರ್ಯಕ್ರಮಕ್ಕೆ ಒಟ್ಟು ₹20 ಕೋಟಿ ಅನುದಾನ ಮೀಸಲಿಡಲಾಗಿದ್ದು, ಪ್ರತಿ ಸಂಸ್ಥೆಗೆ ರೂ. 1.25 ಕೋಟಿವರೆಗೆ ಹಣಕಾಸು ನೆರವು ಒದಗಿಸಲಾಗುತ್ತದೆ.<br><br>**ಬೂಟ್ ಕ್ಯಾಂಪ್ ಕಾರ್ಯಕ್ರಮ:** ಕೃತಕ ಬುದ್ಧಿಮತ್ತೆ (AI), ಫಿನ್‌ಟೆಕ್ (FinTech), ಅಗ್ರಿಟೆಕ್ (AgriTech), ಸೈಬರ್ ಸೆಕ್ಯುರಿಟಿ (Cybersecurity), ಬ್ಲಾಕ್ ಚೈನ್ (Blockchain), ಸುಸ್ಥಿರತೆ (Sustainability) ಮತ್ತು ಅಂತರ್ನಿರ್ಮಿತ ಸಿಸ್ಟಮ್ಸ್ (Embedded Systems) ಸೇರಿದಂತೆ ಹೆಚ್ಚಿನ ಬೇಡಿಕೆಯ ತಂತ್ರಜ್ಞಾನ ಕ್ಷೇತ್ರಗಳಲ್ಲಿನ ಕೌಶಲ್ಯ ಅಂತರವನ್ನು ಕಡಿಮೆ ಮಾಡುವ ಉದ್ದೇಶದಿಂದ Bootcamp ಕಾರ್ಯಕ್ರಮವನ್ನು ರೂಪಿಸಲಾಗಿದೆ. ವಿಶೇಷವಾಗಿ ಬೆಂಗಳೂರಿನ ಹೊರಗಿನ ಪ್ರದೇಶಗಳ ತಾಂತ್ರಿಕ ಮತ್ತು ಎಂಜಿನಿಯರಿಂಗ್ ಸಂಸ್ಥೆಗಳ ವಿದ್ಯಾರ್ಥಿಗಳಿಗೆ ಕೈಗಾರಿಕಾ ಅಗತ್ಯಗಳಿಗೆ ಅನುಗುಣವಾದ ಪ್ರಾಯೋಗಿಕ ಕೌಶಲ್ಯಗಳನ್ನು ಒದಗಿಸಲು ಸರ್ಕಾರ, ಕೈಗಾರಿಕೆ, ಶೈಕ್ಷಣಿಕ ಸಂಸ್ಥೆಗಳು ಮತ್ತು ಇನ್‌ಕ್ಯುಬೇಟರ್‌ಗಳ ಸಹಭಾಗಿತ್ವದಲ್ಲಿ ಈ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುತ್ತದೆ. ರೂ. 10 ಕೋಟಿ ಅನುದಾನದೊಂದಿಗೆ ಪ್ರತಿ ಜಿಲ್ಲೆಯಲ್ಲಿ ಕನಿಷ್ಠ ಎರಡು Bootcamp ಕಾರ್ಯಕ್ರಮಗಳನ್ನು ಆಯೋಜಿಸುವ ಗುರಿ ಹೊಂದಲಾಗಿದೆ. ಪ್ರಸ್ತುತ ಕರ್ನಾಟಕದಾದ್ಯಂತ ಈ |

| | |
|---|---|
| | ಕಾರ್ಯಕ್ರಮಗಳನ್ನು ನಡೆಸಲು ಸಂಸ್ಥೆಗಳ ಆಯ್ಕೆ ಪ್ರಕ್ರಿಯೆ ನಡೆಯುತ್ತಿದೆ.<br><br>**ಹ್ಯಾಕಥಾನ್ ಕಾರ್ಯಕ್ರಮ (Hackathon):** ಬೆಂಗಳೂರಿನ ಹೊರಗಿನ ಪ್ರದೇಶಗಳಲ್ಲಿ ಉದ್ಯಮಶೀಲತೆಯನ್ನು ಉತ್ತೇಜಿಸುವ ಉದ್ದೇಶದಿಂದ ಕರ್ನಾಟಕ ಸರ್ಕಾರವು ಪ್ರತಿ ವರ್ಷ **ಹ್ಯಾಕಥಾನ್** ಕಾರ್ಯಕ್ರಮಗಳನ್ನು ಆಯೋಜಿಸಲಿದೆ. ನಾವೀನ್ಯತೆ, ಸಹಭಾಗಿತ್ವ ಮತ್ತು ಸಮಸ್ಯೆ ಪರಿಹಾರಕ್ಕೆ ವೇದಿಕೆಯಾಗುವ ಈ Hackathonಗ ಳಲ್ಲಿ ಡೆವಲಪರ್‌ಗಳು, ಡಿಸೈನರ್‌ಗಳು, ಕ್ಷೇತ್ರ ತಜ್ಞರು ಮತ್ತು ಹೂಡಿಕೆದಾರರು ಭಾಗವಹಿಸಿ ಸ್ಥಳೀಯ ಸಮಸ್ಯೆಗಳಿಗೆ ಸೂಕ್ತವಾದ ಪರಿಹಾರಗಳನ್ನು ಸಹ-ಸೃಷ್ಟಿಸಲಿದ್ದಾರೆ. ಪ್ರಾದೇಶಿಕ ಪ್ರತಿಭೆಯನ್ನು ಗುರುತಿಸುವುದು, ಸೃಜನಶೀಲ ಚಿಂತನೆಗೆ ಉತ್ತೇಜನ ನೀಡುವುದು, ದೊಡ್ಡ ಸಂಸ್ಥೆಗಳು ಮತ್ತು ಹೂಡಿಕೆದಾರರ ಗಮನ ಸೆಳೆಯುವುದು ಹಾಗೂ ತಳಮಟ್ಟದ ನಾವೀನ್ಯತೆಯನ್ನು ಉತ್ತೇಜಿಸುವುದು ಇದರ ಉದ್ದೇಶವಾಗಿದೆ. ಭಾಗವಹಿಸುವವರಿಗೆ Coding, Prototyping, Marketing ಮತ್ತು Pitching ಸೇರಿದಂತೆ ಸ್ಟಾರ್ಟ್‌ಅಪ್‌ಗಳಿಗೆ ಅಗತ್ಯವಾದ ಕೌಶಲ್ಯಗಳಲ್ಲಿ ಪ್ರಾಯೋಗಿಕ ಅನುಭವ ದೊರೆಯಲಿದೆ. Hackathonಗಳನ್ನು ಆಯೋಜಿಸಲು **TiE Bengaluru** ಅನ್ನು ಸಹಭಾಗಿಯಾಗಿ ನೇಮಕ ಮಾಡಲಾಗಿದೆ.<br><br>ಕರ್ನಾಟಕದಾದ್ಯಂತ ಆಯೋಜಿಸಲಾಗುವ ಒಟ್ಟು 18 ಪ್ರಾದೇಶಿಕ ಹ್ಯಾಕಥಾನ್‌ಗಳ ಮೂಲಕ 425 ಕ್ಕೂ ಹೆಚ್ಚು ತಂಡಗಳನ್ನು ಶಾರ್ಟ್‌ಲಿಸ್ಟ್ ಮಾಡಲಾಗುವುದು. ಇದರಲ್ಲಿ 1,275 ಕ್ಕೂ ಹೆಚ್ಚು ಬಿಲ್ಡರ್‌ಗಳು, ಡೆವಲಪರ್‌ಗಳು ಮತ್ತು ಸ್ಥಾಪಕರು (ಫೌಂಡರ್‌ಗಳು) ಸಕ್ರಿಯವಾಗಿ ಪಾಲ್ಗೊಳ್ಳುತ್ತಾರೆ. ಈ ಕಾರ್ಯಕ್ರಮದಲ್ಲಿ 200 ಕ್ಕೂ ಹೆಚ್ಚು ಮಾರ್ಗದರ್ಶಕರು, ತೀರ್ಪುಗಾರರು ಮತ್ತು ಪರಿಸರ ವ್ಯವಸ್ಥೆಯ ತಜ್ಞರು ಭಾಗವಹಿಸುವರು, 300 ಕ್ಕೂ ಹೆಚ್ಚು ವರ್ಕಿಂಗ್ ಪ್ರೋಟೋಟೈಪ್‌ಗಳು (working prototypes) ಹಾಗೂ Minimum Viable Productಗಳನ್ನು ಯಶಸ್ವಿಯಾಗಿ ಅಭಿವೃದ್ಧಿಪಡಿಸಲಾಗುವುದು.<br><br>**K-Combinator Startup Accelerator:** ಕರ್ನಾಟಕ ಸರ್ಕಾರವು Beyond Bengaluru Mission ಅಡಿಯಲ್ಲಿ **TiE Mangaluru** ಸಹಭಾಗಿತ್ವದಲ್ಲಿ **K-Combinator** ಎಂಬ ಸ್ಟಾರ್ಟ್‌ಅಪ್ ಅಕ್ಸಿಲರೇಟರ್ ಸ್ಥಾಪಿಸಲು ಪ್ರಸ್ತಾಪಿಸಿದೆ. ಡೀಪ್ ಟೆಕ್ (DeepTech), ಹೆಲ್ತ್ ಟೆಕ್ (HealthTech), ಅಗ್ರಿಟೆಕ್ (AgriTech), ಫಿನ್ ಟೆಕ್ (FinTech) ಮತ್ತು ಮರೈನ್ ಟೆಕ್ (MarineTech) ಕ್ಷೇತ್ರಗಳಲ್ಲಿನ ಹೆಚ್ಚಿನ ಸಾಮರ್ಥ್ಯ ಹೊಂದಿರುವ ಸ್ಟಾರ್ಟ್‌ಅಪ್‌ಗಳನ್ನು ಬೆಳೆಸುವುದು ಇದರ ಉದ್ದೇಶವಾಗಿದೆ. ಐದು ವರ್ಷಗಳಲ್ಲಿ 100ಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳನ್ನು ವೇಗವರ್ಧಿಸುವುದು, 1,500ಕ್ಕೂ ಹೆಚ್ಚು ನೇರ ಉದ್ಯೋಗಗಳನ್ನು ಸೃಷ್ಟಿಸುವುದು ಮತ್ತು ಉಡುಪಿ–ಮಂಗಳೂರು ಪ್ರದೇಶವನ್ನು ಪ್ರಮುಖ |

| | |
|---|---|
| | ನಾವೀನ್ಯತಾ ಕೇಂದ್ರವನ್ನಾಗಿ ರೂಪಿಸುವ ಗುರಿಯನ್ನು ಹೊಂದಿದೆ.<br><br>**ಬಿಯಾಂಡ್ ಬೆಂಗಳೂರು ಕ್ಲಸ್ಟರ್ ಸೀಡ್ ಫಂಡ್:** ಉದಯೋನ್ಮುಖ ನಾವೀನ್ಯತಾ ಕ್ಲಸ್ಟರ್‌ಗಳಲ್ಲಿನ ಸ್ಟಾರ್ಟ್‌ಅಪ್‌ಗಳಿಗೆ ಆರಂಭಿಕ ಹಂತದ ಬಂಡವಾಳದ ಲಭ್ಯತೆಯನ್ನು ಸುಧಾರಿಸುವ ಉದ್ದೇಶದಿಂದ ಸರ್ಕಾರವು **Beyond Bengaluru Cluster Seed Fund** ಅನ್ನು ಪರಿಚಯಿಸಿದೆ. ಇದರ ಮೂಲಕ ಬೆಂಗಳೂರಿನ ಹೊರಗಿನ ಪ್ರದೇಶಗಳಲ್ಲಿ ಆರಂಭಿಕ ಹಂತದ ಸ್ಟಾರ್ಟ್‌ಅಪ್‌ಗಳಿಗೆ ಅಗತ್ಯವಿರುವ ಬಂಡವಾಳವನ್ನು ಸುಲಭವಾಗಿ ಲಭ್ಯವಾಗುವಂತೆ ಮಾಡಲು ಒತ್ತು ನೀಡಲಾಗಿದೆ. |

**(ಐಟಿಬಿಟಿ 98 ಎಲ್‌ಸಿಎಂ 2026)**

(ಪ್ರಿಯಾಂಕ್ ಖರ್ಗೆ)
ಗ್ರಾಮೀಣಾಭಿವೃದ್ಧಿ... 

| ಕ್ರಮ ಸಂಖ್ಯೆ | ಜಿಲ್ಲೆ | ವರ್ಷ | | | | | ಒಟ್ಟು |
|---|---|---|---|---|---|---|---|
| | | 2021-22 | 2022-23 | 2023-24 | 2024-25 | 2025-26 | |
| 1 | ಬಾಗಲಕೋಟೆ | 1 | 2 | 5 | 2 | 3 | 13 |
| 2 | ಬಳ್ಳಾರಿ | 1 | 1 | 4 | 5 | 4 | 15 |
| 3 | ಬೆಳಗಾವಿ | 2 | 17 | 12 | 12 | 9 | 52 |
| 4 | ಬೆಂಗಳೂರು ಗ್ರಾಮೀಣ | - | 12 | 30 | 27 | 13 | 82 |
| 5 | ಬೆಂಗಳೂರು ನಗರ | 168 | 290 | 334 | 510 | 511 | 1813 |
| 6 | ಬೀದರ್ | 2 | 2 | 5 | 3 | 9 | 21 |
| 7 | ಚಾಮರಾಜನಗರ | - | 1 | 1 | 1 | 1 | 4 |
| 8 | ಚಿಕ್ಕಬಳ್ಳಾಪುರ | - | 1 | 1 | 3 | 1 | 6 |
| 9 | ಚಿಕ್ಕಮಗಳೂರು | - | - | 2 | 3 | 3 | 8 |
| 10 | ಚಿತ್ರದುರ್ಗ | 1 | 1 | 10 | 1 | 2 | 15 |
| 11 | ದಕ್ಷಿಣ ಕನ್ನಡ | 8 | 17 | 21 | 20 | 16 | 82 |
| 12 | ದಾವಣಗೆರೆ | 2 | 3 | 2 | 1 | 4 | 12 |
| 13 | ಧಾರವಾಡ | 13 | 15 | 22 | 15 | 20 | 85 |
| 14 | ಗದಗ | - | 2 | 1 | 2 | 5 | 10 |
| 15 | ಹಾಸನ | 2 | 3 | 1 | 5 | 8 | 19 |
| 16 | ಹಾವೇರಿ | 1 | - | 1 | 1 | 1 | 4 |
| 17 | ಕಲಬುರ್ಗಿ | 5 | 6 | 21 | 10 | 7 | 49 |
| 18 | ಕೊಡಗು | 1 | 2 | 1 | 2 | 5 | 11 |
| 19 | ಕೋಲಾರ | - | - | 3 | 2 | 2 | 7 |
| 20 | ಕೊಪ್ಪಳ | 2 | 2 | 2 | 2 | 3 | 11 |
| 21 | ಮಂಡ್ಯ | - | 3 | 2 | 2 | 3 | 10 |
| 22 | ಮೈಸೂರು | 10 | 19 | 18 | 31 | 33 | 111 |
| 23 | ರಾಯಚೂರು | 1 | - | 1 | - | 5 | 7 |
| 24 | ರಾಮನಗರ | 1 | 1 | - | 1 | 3 | 6 |
| 25 | ಶಿವಮೊಗ್ಗ | - | - | 8 | 6 | 4 | 18 |
| 26 | ತುಮಕೂರು | 3 | 1 | 9 | 2 | 5 | 20 |
| 27 | ಉಡುಪಿ | 5 | 6 | 11 | 26 | 6 | 54 |
| 28 | ಉತ್ತರ ಕನ್ನಡ | - | 4 | 4 | 2 | 11 | 21 |
| 29 | ವಿಜಯಪುರ | 1 | 3 | 3 | 2 | 3 | 12 |
| 30 | ವಿಜಯನಗರ | - | - | 2 | - | - | 2 |
| 31 | ಯಾದಗಿರಿ | - | 1 | - | - | 3 | 4 |
| | **ಒಟ್ಟು** | **230** | **415** | **537** | **699** | **703** | **2584** |

**ಅನುಬಂಧ (ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:530)**